# ಪ್ರಾರ್ಥನೆ

## ಶ್ರೀವಿವೇಕಾನಂದ ಪ್ರಭಾತ ಪ್ರಾಂಜಲಿ

ನಿನ್ನ ಲೋಕದಿ ಸಮಾಧಿಯೊಳಿದ್ದ ಶಿವ ನೀನು
ಭವದ ಬವಣೆಯ ಕೇಳಿ ಭುವಿಗೆ ಇಳಿದೆ;
ಬಳಲಿ ಬೆಂಡಾದವರ ಕಂಬನಿಯ ನೀ ತೊಡೆದೆ,
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

ಬಾಲರಿಗೆ ಯುವಕರಿಗೆ ನೀನೆ ನಾಯಕನಯ್ಯ,
ಆಟದಲಿ ಪಾಠದಲಿ ನೀ ಮೊದಲಿಗ;
ಪರರ ರಕ್ಷಕ ನೀನು ಪರಹಿತದಿ ನಿಸ್ಸೀಮ!
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

ಚೇಷ್ಟೆಯಲಿ ಮಾರುತಿಯು, ಗಾಯನದಿ ಗಂಧರ್ವ,
ಜ್ಞಾನಪಂಡಿತ ನೀನು, ದರ್ಶನ ಮಹರ್ಷಿ;
ಯತಿತಿಲಕ ವೈರಾಗಿ, ನೀನಾಗದೇನಿಹುದು?
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

ಪರಹಂಸಗುರುವಿನೆಡೆ ದಿಕ್ಕೆಟ್ಟು ಧಾವಿಸಿದೆ,
ಮೋಕ್ಷದಾತುರದ ಪರಿ ಜಗಕೆ ತೋರ್ದೆ;
ಆ ಹಂಬಲವನೆನ್ನ ಎದೆಗೆ ಹರಿಯಿಸು ಗುರುವೆ,
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

ಪ್ರಶ್ನೆಗಳ ಮಳೆಗರೆದೆ, ಗುರುವ ನೀ ಪರಿಕಿಸಿದೆ,
ಗುರುಪದಕೆ ನಿನ್ನ ನೀ ತೆತ್ತುಕೊಂಡೆ;
ಪರಿಶುದ್ಧ ಸೇವೆಯಲಿ ಸಂತಸವ ನೀನಿತ್ತೆ,
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

ರಾಮಕೃಷ್ಣರ ಕಂಪ ಪಸರಿಸುವ ಮರುತ ನೀ,
ರಾಮಕೃಷ್ಣರ ಭೇರಿ, ಬಾಜಿಸುವ ನೀ;
ರಾಮಕೃಷ್ಣರ ಸೂರ್ಯ, ಹೊಳೆವ ಕನ್ನಡಿಯು ನೀ!
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

ಗರ್ವದಲಿ ಧರ್ಮಾಂಧರಾದವರ ಭಂಜಿಸಿದೆ,
ಆರ್ಷಧರ್ಮದ ಪ್ರಭೆಯ ನೀ ಬೆಳಗಿದೆ;
ನೈಜ ಧರ್ಮದ ತಿರುಳ ಜಗಕೆಲ್ಲ ಬೋಧಿಸಿದೆ!
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!



ಧಗಧಗಿಸುವಗ್ನಿಯಿಂ ಕಿಡಿ ನೂರು ಸಿಡಿವಂತೆ
ಅಳವಿಲ್ಲದರಿವಿನಾ ಬೆಳಕ ನೀ ಪಸರಿಸುತ
ಭರತಭುವಿಯುದ್ದಕ್ಕು ಸಂಚರಿಸಿದೆ!
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

ನಿನ್ನ ವದನದ ಸೆಳೆತಕೆಣೆಯಿಲ್ಲ, ಓ ಗುರುವೆ,
ನಿನ್ನ ಪೌರುಷ-ತ್ಯಾಗ-ಶಿಶು ಸಹಜತೆ
ಕರಗುವದೆ-ಪ್ರೀತಿಗಳನೆಲ್ಲಿ ಕಾಣಲುಬಹುದು?
ಉದಯದಲಿ ನಮನವಿದೊ
ಶ್ರೀ ವಿವೇಕಾನಂದಗುರುವೆ ನಿನಗೆ!

ಅರಳಿರುವ ಕುಸುಮಗಳ ದುಂಬಿಗಳು ಮುತ್ತುತಿವೆ,
ನಿನಗಾಗಿ ಕೋಗಿಲೆಯು ದನಿಗೈದಿದೆ;
ಅರುಣನಿವನಿದೊ ನಿನ್ನ ಪದಕೆ ನಮಿಸುವನಯ್ಯ!
ಉದಯದಲಿ ನಮನವಿದೊ
ಶ್ರೀ ವಿವೇಕಾನಂದಗುರುವೆ ನಿನಗೆ!

ನಿನ್ನ ಸಿರಿಪದಕೆರಗಿ ಶಿರದಿ ಹರಕೆಯ ಧರಿಸಿ
ಧನ್ಯತೆಗೆ ತವಕಿಸುವ ಭಕ್ತಜನರು
ನಿನ್ನೆದುರು ನಿಂದಿಹರು, ಸುಪ್ರಭಾತವ ನೀಡು!
ಉದಯದಲಿ ನಮನವಿದೊ
ಶ್ರೀವಿವೇಕಾನಂದಗುರುವೆ ನಿನಗೆ!

(ಮೂಲ ಸಂಸ್ಕೃತ: **ಸ್ವಾಮಿ ಹರ್ಷಾನಂದ**
ಕನ್ನಡಾನುವಾದ : **ಡಾ. ಎಚ್. ಎನ್. ಮುರಳೀಧರ**)